ರೆಕರಿಂಗ್ ಠೇವಣಿಯನ್ನು ನ್ಯಾಷನಲ್ ಕೊ-ಆಪರೇಟಿವ್ ಬ್ಯಾಂಕ್ ನಿಯಮಿತ ಬೆಂಗಳೂರು ಇವರು ಷೇರುದಾರರಿಗೆ ಕಡ್ಡಾಯ ಪಡಿಸುತ್ತಿರುವುದು.

2166 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನ್ಯಾಷನಲ್ ಸಹಕಾರ ಬ್ಯಾಂಕ್ ಲಿ, ಬೆಂಗಳೂರು ಇದರಲ್ಲಿ ಸಾಲ ಪಡೆಯುವ ಸದಸ್ಯರಿಗೆ ರೂ 25 ಮತ್ತು 50-00 ರಿಕರಿಂಗ್ ಠೇವಣಿ ಖಾತೆಯನ್ನು ಕಡ್ಡಾಯವಾಗಿ ತೆರೆಯಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬ್ಯಾಂಕಿನವರು ಸಾಲ ಮಂಜೂರು ಮಾಡುವ ಮೊದಲೇ ಸದಸ್ಯರಿಗೆ ರಿಕರಿಂಗ್ ಖಾತೆ ತೆರೆಯಲು ಸಾಲ ಮಂಜೂರಾತಿ ಆದೇಶದಲ್ಲೇ ಸೂಚಿಸುವುದು ನಿಜ ಸಂಗತಿಯೆ?

ಇ) ಸಾಲ ಮಂಜೂರಾತಿ ಮಾಡುವ ಸಮಯದಲ್ಲಿ ಸದಸ್ಯರಿಗೆ ರಿಕರಿಂಗ್ ಡಿಪಾಜಿಟ್‌ಖಾತೆ ತೆರೆಯಲು ಒತ್ತಾಯಪಡಿಸಲು ಸರ್ಕಾರವು ಅನುಮತಿ ನೀಡಿದೆಯೇ?

ಈ) ಇಲ್ಲದಿದ್ದಲ್ಲಿ ಈ ರೀತಿ ಬ್ಯಾಂಕಿನ ಸದಸ್ಯರಿಗೆ ಒತ್ತಾಯಪಡಿಸುವ ಆಡಳಿತ ಮಂಡಳಿಯ ಸದಸ್ಯರ ಮೇಲೆ ಸರ್ಕಾರಿ ಕ್ರಮ ಕೈಗೊಳ್ಳುವುದೆ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು)

ಅ) ನ್ಯಾಷನಲ್ ಸಹಕಾರ ಬ್ಯಾಂಕ್ ನಿ, ಬೆಂಗಳೂರು ಇದರಲ್ಲಿ ಸಾಲ ಪಡೆಯುವ ಸದಸ್ಯರಿಗೆ ರೂ. 25-00 ಮತ್ತು 50-00 ರಿಕರಿಂಗ್ ಡಿಪಾಜಿಟ್‌ನ ಖಾತೆಯನ್ನು ತೆರೆಯಲು ಠೇವಣಿ ಸಂಗ್ರಹಣೆ ದೃಷ್ಟಿಯಿಂದ ಸೂಚಿಸಲಾಗುತ್ತದೆ. ಆದರೆ ಇದು ಕಡ್ಡಾಯವಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದ ಎಲ್ಲಾ ವಿಶ್ವವಿದ್ಯಾಲಯದ ಹಂಗಾಮಿ ಅಧ್ಯಾಪಕರುಗಳ ಸಂಖ್ಯೆ

2146 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಇರುವ ಹಂಗಾಮಿ ಅಧ್ಯಾಪಕರ ಸಂಖ್ಯೆಯೆಷ್ಟು ಹಾಗೂ ಎಷ್ಟು ವರ್ಷಗಳಿಂದ ಅವರು ಸೇವೆ ಸಲ್ಲಿಸುತ್ತಿದ್ದಾರೆ,, ಅವರು ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಆ) ಒಟ್ಟು ಹಂಗಾಮಿ ಅಧ್ಯಾಪಕರ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರ ಸಂಖ್ಯೆ ಎಷ್ಟು?

ಇ) ಮೀಸಲಾತಿಯ ನೀತಿಯ ಅನುಸಾರವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಧ್ಯಾಪಕರ ಸೇವೆಯನ್ನು ಖಾಯಂ ಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕಳೆದ 10ವರ್ಷಗಳಿಂದ 89ಉಪಾಧ್ಯಾಯರುಗಳು ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದಾರೆ.

ಆ) ಪರಿಶಿಷ್ಟ ಜಾತಿ - 10
ಪರಿಶಿಷ್ಟ ವರ್ಗ - 01

ಇ) ಇಲ್ಲ.

ಬೀದರ್ ಜಿಲ್ಲೆಯಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ

2186 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಶಿಕ್ಷಣ ಮತ್ತ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿರುವ ಒಟ್ಟು ಖಾಸಗಿ ಶಿಕ್ಷಣ ಸಂಸ್ಥೆಗಳೆಷ್ಟು?

ಆ) ಇವುಗಳಲ್ಲಿ ಎಷ್ಟು ಶಿಕ್ಷಣ ಸಂಸ್ಥೆಗಳು ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿವೆ?

ಇ) ಈ ರೀತಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಇರುವ ಷರತ್ತುಗಳೇನು?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ)	ಪ್ರಾಥಮಿಕ ಶಾಲೆಗಳು	189
	ಪ್ರೌಢ ಶಾಲೆಗಳು	75
	ಇಂಜಿನಿಯರಿಂಗ್ ಕಾಲೇಜುಗಳು	2
	ತಾಂತ್ರಿಕ ಶಿಕ್ಷಣ ಸಂಸ್ಥೆಗಳು	5
	ಸ್ವತಂತ್ರ ಪದವಿ ಪೂರ್ವ ಕಾಲೇಜು	26
	ಸಂಯುಕ್ತ ಪದವಿ ಪೂರ್ವ ಕಾಲೇಜು	19
	ಮಹಾ ವಿದ್ಯಾಲಯಗಳು	14
	ಒಟ್ಟು	**330**
ಆ)	ಪ್ರಾಥಮಿಕ ಶಾಲೆಗಳು	100
	ಪ್ರೌಢ ಶಾಲೆಗಳು	54
	ಇಂಜಿನಿಯರಿಂಗ್ ಕಾಲೇಜುಗಳು	ಇಲ್ಲ
	ತಾಂತ್ರಿಕ ಶಿಕ್ಷಣ ಸಂಸ್ಥೆ-ಇಲ್ಲ	
	ಸ್ವತಂತ್ರ ಪದವಿ ಪೂರ್ವ ಕಾಲೇಜು	12
	ಮಹಾ ವಿದ್ಯಾಲಯಗಳು	9
	ಸಂಯುಕ್ತ ಪದವಿ ಪೂರ್ವ ಕಾಲೇಜು	8
	ಒಟ್ಟು	**175**

ಇ) ಪ್ರಾಥಮಿಕ ಶಾಲೆಗಳಿಗೆ ಅನುದಾನ ಸಂಹಿತೆ ನಿಯಮ 22 ಹಾಗೂ ಪ್ರೌಢ ಶಾಲೆಗಳಿಗೆ -16 ಹಾಗೂ ತಾಂತ್ರಿಕ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಭಾರತ ಸರ್ಕಾರದ ಅನುಮೋದನೆ, ಹಾಗೂ ಸ್ವತಂತ್ರ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿಗೆ ಅನುದಾನ ಸಂಹಿತೆ ನಿಯಮಗಳು ಹಾಗೂ ಇಲಾಖಾ ನಿಯಮಗಳ ಮೇರೆಗೆ ಮಹಾ ವಿದ್ಯಾಲಯಗಳಿಗೆ 7 ವರ್ಷ ಪೂರೈಸಬೇಕೆಂಬ ಷರತ್ತಿನೊಂದಿಗೆ ಅನುದಾನಕ್ಕೆ ಒಳಪಡಿಸಲಾಗುತ್ತಿದೆ. ಹಾಗೂ ನಿಯಮ 26 ರನ್ವಯ ವಿಶ್ವವಿದ್ಯಾಲಯ ವಿಧಿಸಿರುವ ಷರತ್ತು ಪೂರೈಸಬೇಕು.